1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ ಚನ್ನಗಿರಿ .

**ಸಿಸಿ ನಂ.237/2017**

ಹೆಸರುಃ ರಾಘವೇಂದ್ರ ಕಾಂಡಿಕೆ ಸಿ.ಡಬ್ಲ್ಯೂಃ 11

ತಂದೆಃ ಸುರೇಶಪ್ಪ ಪಿ.ಡಬ್ಲ್ಯೂಃ 11

ವಯಸ್ಸುಃ 42

ಉದ್ಯೋಗಃ ಪಿ ಐ ಹಿರಿಯೂರು ನಗರ ಪೊ ಠಾಣೆ

ವಾಸ ಸ್ಥಳಃ ಹಿರಿಯೂರು

ಸಾಕ್ಷಿಗೆ ದಿನಾಂಕಃ 23.10.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-6 ನನ್ನ ತಂಗಿಯ ಗಂಡ ಚಾಸಾ-7 ನನ್ನ ತಂಗಿ,ಚಾಸಾ-8 ಮತ್ತು 10 ನನ್ನ ಅಣ್ಣಂದಿರು, ಚಾಸಾ-9 ನನ್ನ ಅತ್ತಿಗೆ, ಚಾಸಾ-12 ಮತ್ತು 13 ನನ್ನ ಪರಿಚಯಸ್ಥರು. ಚಾಸಾ-11 ನನ್ನ ಚಿಕ್ಕಪ್ಪ. ಆರೋಪಿತರು ನಮ್ಮ ಪಕ್ಕದ ಗ್ರಾಮದವರು. , ಚಾಸಾ-7 ಮತ್ತು 9 ರ

ಡಿಸೆಂಬರ್ 2014 ರಿಂದ ಆಗಸ್ಟ್ 2014 ರವರೆಗೆ ಪಿ.ಎಸ್.ಐ ಆಗಿ ಚನ್ನಗಿರಿ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 05-08-2015 ರಂದು ಚಾಸಾ 10 ರವರಿಂದ ಪ್ರಕರಣದ ಕಡತವನ್ನು ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇದಿನ ಆರೋಪಿಯನ್ನು ಠಾಣೆಗೆ ಹಾಜರುಪಡಿಸಿಕೊಂಡು ಆತನಿಗೆ ದಂ.ಪ್ರ. ಸಂಹಿತೆ ಕಲಂ 41(ಎ) ಅಡಿಯಲ್ಲಿ ನೋಟೀಸನ್ನು ಜಾರಿಮಾಡಿರುತ್ತೇನೆ. ಅದೇ ದಿನ ಸದರಿ ಆರೋಪಿಯನ್ನು ವಿಚಾರಣೆ ಮಾಡಿ ಸ್ವ ಇಚ್ಛಾ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ದಿಃ 18-08-2015 ರಂದು ಸದರಿ ಪ್ರಕರಣದಲ್ಲಿ ಅಮಾನತು ಪಡಿಸಿಕೊಂಡ ಮ್ಯುಟೇಷನ್ ಹಾಗೂ ಇತರೆ ದಾಖಲೆಗಳನ್ನು ಖಚಿತತೆಯನ್ನು ದೃಢಪಡಿಸಿಕೊಳ್ಳಲು ಚಾಸಾ 1 ರವರಿಗೆ ಪತ್ರ ಬರೆದಿರುತ್ತೇನೆ. ದಿಃ 19-11-2015 ರಂದು ಚಾಸಾ 1 ರವರಿಂದ ಸದರಿ ಮೇಲ್ಕಂಡ ದಾಖಲಾತಿಗಳಿಗೆ ಸಂಬಂಧಿಸಿದಂತೆ ಚಾಸಾ 1 ರವರು ವರದಿಯನ್ನು ಕಳುಹಿಸಿಕೊಟ್ಟಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗಿ ತಿದ್ದುಪಡಿ ಆಗಿರುತ್ತದೆ ಎಂದು ದೃಢಪಡಿಸಿರುತ್ತಾರೆ. ನಂತರ ಸದರಿ ದಾಖಲೆಯನ್ನು ಕಡತಕ್ಕೆ ಅಳವಡಿಸಿರುತ್ತೇನೆ. ದಿಃ 19-11-2015 ರ ಪತ್ರ ವನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ

ಸಾಕ್ಷಿಗೆ ದಿನಾಂಕಃ25-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು. **ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 02-01-2016 ಕ್ಕೆ ಚಾಸಾ-8 ರವರು ಬೆಂಗಳೂರಿನ ಎಫ್ ಎಸ್ ಎಲ್ ಗೆ ಹಾಜರುಪಡಿಸಿ ಸಂಬಂಧಪಟ್ಟ ಸ್ರೀಕೃತಿಯನ್ನು ಪಡೆದು ಠಾಣೆಗೆ ಹಾಜರಾಗಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರತ್ತೇನೆ.

ಸಾಕ್ಷಿ ಕಡತದಲ್ಲಿನ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ನಂತರ ನನಗೆ ವರ್ಗಾವಣೆಯಾದ ಪ್ರಯುಕ್ತ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-12 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ಎಸ್ ವಿ ಎನ್ ವಕೀಲರಿಂದ –**

ಅರೋಪಿಯನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿಗೆ ನಾನು ಯಾವುದೇ ನೋಟಿಸನ್ನು ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಭಾಗಶಃ ತನಿಖೆಯನ್ನು ಮಾಡಿರುತ್ತೇನೆ. ತನಿಖಾ ಕಾಲಕ್ಕೆ ಸರ್ವೆ ನಂ 28/ಪಿ1 ರಿಂದ ಸರ್ವೆ ನಂ 28/ಪಿ3 ರವರ ಖಾತೆದಾರರು ಯಾರು ಎಂದು ನಾನು ತಿಳಿದುಕೊಂಡಿರುವುದಿಲ್ಲ. ದೊಂಡರಘಟ್ಟ ಗ್ರಾಮ ಸರ್ವೆ ನಂ 28/ಪಿ1 ರಿಂದ ಸರ್ವೆ ನಂ 28/ಪಿ3ರವರೆಗಿನ ಖಾತೆಗಳು ಆರೋಪಿ ಮತ್ತು ಆತನ ಅಕ್ಕನಾದ ಶಕುಂತಲಾಬಾಯಿ ಮತ್ತು ಶಾಂತಿಬಾಯಿಯವರ ಹೆಸರಿನಲ್ಲಿದೆ ಎಂದರೆ ಸರಿ.

ನಿಪಿ-6ರಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಮೊಹರಿನೊಂದಿಗೆ ತಹಶೀಲ್ದಾರ್ ರವರ ಸಹಿ ಇದೆ ಎಂದರೆ ಸಾಕ್ಷಿ ಸದರಿ ನಮೂದಿನ ಸಹಿ ಮತ್ತು ಮೊಹರು ಇದೆ ಎಂದು ನುಡಿಯುತ್ತಾರೆ. ಸದರಿ ತಹಶೀಲ್ದಾರ್ ರವರನ್ನು ನಾನು ವಿಚಾರಣೆಗೆ ಒಳಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ತನಿಖಾವಧಿಯಲ್ಲಿ ನಾನು ವಿಚಾರಣೆಗೆ ಒಳಪಡಿಸಿಲ್ಲ ಎಂದು ನುಡಿಯುತ್ತಾರೆ ಸದರಿಯವರನ್ನು ತನಿಖೆಗೆ ಒಳಪಡಿಸಲು ನನಗೇನಾದರೂ ತೊಂದರೆಯಿತ್ತೆ ಎಂದೆ ಸಾಕ್ಷಿ ನನಗೆ ವರ್ಗಾವಣೆಯಾದ ನಿಮಿತ್ತ ನಾನು ತನಿಖೆ ಮುಂದುವರೆಸಿಲ್ಲ ಎಂದ ನುಡಿಯುತ್ತಾರೆ.

ದಿಃ19-11-2016 ರಂದು ನನಗೆ ಚನ್ನಗಿರಿ ತಹಶೀಲ್ದಾರ್ ರವರುನಿಪಿ-10 ರಂತೆ ಒಂದು ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ನಾನೇ ತನಿಖಾಧಿಕಾರಿಯಾಗಿದ್ದೆ ಎಂದರೆ ಸರಿ. ಸದರಿ ನಿಪಿ-10 ರೊಂದಿಗೆ ನಿಪಿ-6 ಮತ್ತು

ಮ್ಯಾಟೇಶನ ಗಳಾದ ನಿಪಿ-10 ರಿಂದ 12 ನ್ನು ಲಗತ್ತಿಸಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ತಹಶೀಲ್ದಾರ್ ರವರನ್ನು ಮತ್ತು ಗ್ರಾಮ ಲೆಕ್ಕಾಧಿಕಾರಿಗಳನ್ನು ನಗೆ ವಿಚಾರಣೆಗೆ ಒಳಪಡಿಸಲು ತೊಂದರೆಯಿರಲಿಲ್ಲ ಎಂದರೆ ಸಾಕ್ಷಿ ನನಗೆ ಬೇರ ಪ್ರಕರಣಗಳು ಇದ್ದ ಕಾರಣ ಸದರಿಯವನ್ನು ನಾನು ವಿಚಾರಣೆಗೆ ಒಳಪಡಿಸಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿಯವರನ್ನು ವಿಚಾರಣೆಗೆ ಒಳಪಡಿಸಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಚಿತಾವಣೆ ಮೇರೆಗೆ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೆನೆ ಎಂದರೆ ಸರಿಯಲ್ಲ. ನಿಪಿ-6,10 ಮತ್ತು 11 ರಲ್ಲಿ ಯಾವುದೇ ಕೈ ಬರವಣಿಗೆ ಇಲ್ಲ ಎಂದರೆ ಸಾಕ್ಷಿ ಮೇಲ್ನೋಟಕ್ಕೆ ಯಾವುದೂ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-6,10 ಮತ್ತು 11 ರಲ್ಲಿರುವ ವೃತ್ತಾಕರಣ ಸ್ಟಿಕ್ಕರ್ ಗಳು ಯಾರಿಗೆ ಸಂಬಂಧಿಸಿದ್ದ ಎಂದರೆ ಸಾಕ್ಷಿ ಸದರಿ ಸ್ಟಿಕ್ಕರ್ ಗಳ ಕುರಿತು ಸಂಬಂಧಟ್ಟ ತಜ್ಞರು ವಿವರ ನೀಡಬೇಕು ಎಂದು ನಡಿಯುತ್ತಾರೆ. ನಿಪಿ-6 ನ್ನು ಯಾರು, ಯಾವಾಗ ತಯಾರಿಸಿರುತ್ತಾರೆ ಎಂದು ನಾನು ತನಿಖೆ ಕೈ ಗೊಂಡಿಲ್ಲ ಎಂದರೆ ನನಗೆ ವರ್ಗಾವಣೆಯಾದ ನಿಮಿತ್ತ ನಾನು ತನಿಖೆ ಮುಂದುವರೆಸಿಲ್ಲ ಎಂದ ನುಡಿಯುತ್ತಾರೆ.

ಹಾಗಾದರೇ ನಾನು ನಿಪಿ-6ರ ಕುರಿತ ಯಾವುದೇ ತನಿಖೆ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-11 ಮ್ಯೂಟೇಶನ್ ರಿಜಿಸ್ಟರ್ ಎಕ್ಸ್ ಟ್ರಾಕ್ಟ್ ಎಂದರೆ ಸರಿ. ಸದರಿ ನಿಪಿ- 10 ಮತ್ತು 11 ನ್ನು ಯಾರು,ಎಲ್ಲಿ, ಯಾವಾಗ ತಯಾರಿಸಿರುತ್ತಾರೆ ಎಂದು ನಾನು ತನಿಖೆ ಕೈಗೊಂಡಿದ್ದೀರ ಎಂದರೆ ಸಾಕ್ಷಿ ನಾನು ಸದರಿ ದಾಖಲೆಗಳ ಭಾಗಶಃ ತನಿಖೆ ಕೈಗೊಂಡಿದ್ದು ಸದರಿ ದಾಖಲೆಗಳ ನೈಜತೆಯ ಪರೀಕ್ಷೆಗಾಗಿ ನಿಪಿ-13 ರಂತೆ ವಿಧಿ ವಿಜ್ಞಾನ ಕೇಂದ್ರಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪ್ರಸ್ತುತ ಪ್ರಕರಣದಲಿ ಯಾವುದೇ ಭಾಗಶ್ಹ ತನಿಖೆಯ ನು ಕೈಗೊಂಡಿಲ್ಲದೆ ಇದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

ಮತ್ತು ಜೆಎಂಎಫ್ ಸಿ, ಚನ್ನಗಿರಿ.